ಕಳವಳದಿಂದ ಹರಿಲಾಲನ ಕೈಯನ್ನು ಹಿಡಿದರು. ಹರಿಲಾಲ ಉತ್ತರಿಸುವುದಕ್ಕೂ ಮೊದಲೇ ಆ ಸಜ್ಜನರು, ಅವರ ಸಮೀಪದಲ್ಲಿಯೇ ಗುಂಪಿನಲ್ಲಿ ನಿಂತಿದ್ದ ಎತ್ತರದ ನಿಲುವಿನ, ನಗುಮುಖದ, ಪ್ರಭಾವಶಾಲಿಯಾಗಿ ತೋರುತ್ತಿದ್ದ ಓರ್ವ ಪಾರಸಿ ಸಜ್ಜನರ ಗಮನವನ್ನು ಸೆಳೆಯುತ್ತಾ ಹೇಳಿದರು, 'ಮಿಸ್ಟರ್ ಗೋದರೇಜ್! ಇವರನ್ನು ಭೇಟಿಯಾಗಿ...ಇವರು ಮಿಸ್ಟರ್ ಹರಿಲಾಲ್ ಗಾಂಧಿ. ಬಾಪೂ ಅವರ ಜ್ಯೇಷ್ಠ ಪುತ್ರರು. ಇವರು ತುಂಬಾ ಧೈರ್ಯಶಾಲಿಗಳು ಹಾಗೂ ಚಿತ್ತಾಕರ್ಷಕ ವ್ಯಕ್ತಿಗಳು.'

'ಹರಿಲಾಲ್?' ಗೋದರೇಜ್ ಅವರು ಕೈಚಾಚಿ ಹರಿಲಾಲನ ಕೈಯನ್ನು ಕುಲುಕಿದರು, 'ಇವತ್ತು ಇವರು ಇಲ್ಲಿಗೆ ಬಂದಿರುವುದು ಸಂತೋಷದ ಸಂಗತಿಯಾಗಿದೆ. ನನಗಂತೂ, ಹರಿಲಾಲರ ರೂಪದಲ್ಲಿ ಸ್ವತಃ ಬಾಪೂ ಅವರೇ ಬಂದಿದ್ದಾರೆ ಎಂದು ಸಂತೋಷವಾಗುತ್ತಿದೆ.'

ಹರಿಲಾಲ ಅಕಸ್ಮಾತ್ ಕ್ಷೋಭೆಗೊಳಗಾದ. ಆದರೆ ಇದು ಗೋದರೇಜ್ ಸೇಠ್‌ರಿಗೆ ಗೊತ್ತಾಗದಂತೆ ಎಚ್ಚರ ವಹಿಸಿದ. ಅವನೂ ಸಹ ಉತ್ಸಾಹದಿಂದ ಅವರ ಕೈಯನ್ನು ಕುಲುಕಿದ.

'ಗೋದರೇಜ್ ಸೇಠ್‌ಜಿ, ನಿಮ್ಮನ್ನು ಭೇಟಿಯಾಗಿ ನನಗೂ ತುಂಬಾ ಸಂತೋಷವಾಯಿತು' ಹರಿಲಾಲ ವಿನಯದಿಂದ ಹೇಳಿದ, 'ನಿಮ್ಮ ಕಂಪನಿ ದೇಶವಿಡೀ ಪ್ರಸಿದ್ಧಿಯಾಗಿದೆ. ನೀವು ಸ್ವದೇಶಿ ಮಾಲಿನಲ್ಲಿ ಗುಣಮಟ್ಟವನ್ನು ಕಾಯ್ದುಕೊಂಡಿದ್ದೀರಿ, ಇದಕ್ಕಾಗಿ ನೀವು ಅಭಿನಂದನೆಗೆ ಪಾತ್ರರು.'

'ಅಭಿನಂದನೆ ಯಾಕೆ ಹರಿಲಾಲ್?' ಗೋದರೇಜರು ನಗುತ್ತಾ ಹೇಳಿದರು, 'ನಮ್ಮ ಜನರಲ್ಲಿ ಇನ್ನೂ ವಿದೇಶಿ ಮಾಲುಗಳ ವ್ಯಾಮೋಹ ಕಡಿಮೆಯಾಗಿಲ್ಲ. ನೋಡಿ, ಇದೀಗ ತಾನೇ ನಾವು ಒಂದು ಸ್ವಚ್ಛ ಸ್ವದೇಶಿ ಸಾಬೂನನ್ನು ತಯಾರಿಸಿ ಬಜಾರಿಗೆ ಬಿಟ್ಟಿದ್ದೇವೆ, ಆದರೆ ಅದರ ಮಾರಾಟ ಅಷ್ಟಾಗಿ ನಡೆಯುತ್ತಿಲ್ಲ.'

'ಸೇಠ್‌ಜಿ, ಇದೇನು ಹೇಳುತ್ತಿದ್ದೀರ?' ಹರಿಲಾಲನಿಗೆ ಆಶ್ಚರ್ಯವಾಗಿತ್ತು. ಅವನು ದೀರ್ಘ ಸಮಯದ ನಂತರ ಎಲ್ಲರ ನಡುವೆ ನಿಂತು ಅಧಿಕಾರದಿಂದ ಮಾತನಾಡುವ ಅವಕಾಶ ಅವನಿಗೆ ಲಭಿಸಿತ್ತು. ಹೀಗಾಗಿ ಹರಿಲಾಲನ ವರ್ಚಸ್ಸು ಪರಿಣಾಮವನ್ನು ಬೀರುತ್ತಿತ್ತು. 'ಪ್ರತಿಯೊಬ್ಬರಲ್ಲೂ ಸ್ವದೇಶಿ ಮಾಲುಗಳ ಬಗ್ಗೆ ಆಸಕ್ತಿ ಹೆಚ್ಚುವುದೆಂದು ನನಗೆ ಅನ್ನಿಸುತ್ತದೆ. ಇಂಥ ಪರಿಸ್ಥಿತಿಗಳಲ್ಲಿ ನಿಮ್ಮ ಹೊಸ ಸಾಬೂನು ಮಾರಾಟವಾಗದಿದ್ದರೆ, ನಿಮ್ಮ ವ್ಯಾಪಾರದ ವಿಧಾನದಲ್ಲಿ ಎಲ್ಲೋ ಯಾವುದೋ ಕೊರತೆಯಿದೆ ಎಂದು ನನಗನ್ನಿಸುತ್ತದೆ.'

ಈಗ ಗೋದರೇಜ್ ಸೇಠ್‌ಜಿ ಗಟ್ಟಿಯಾಗಿ ನಕ್ಕರು. ಅವರು ಹರಿಲಾಲನ ಹೆಗಲ ಮೇಲೆ ಕೈಯಿಟ್ಟು ಮುಗ್ಧತೆಯಿಂದ ಹೇಳಿದರು 'ಮಿಸ್ಟರ್ ಗಾಂಧಿ, ನಮ್ಮ ಮಾರಾಟದ ವಿಧಾನ ಚೆನ್ನಾಗಿಯೇ ಇದೆ. ಆದರೂ ನೀವು ಹೇಳುತ್ತಿದೀರ ಅಂತ... ಒಂದು ವೇಳೆ ಆ ತಪ್ಪನ್ನು ಯಾರಾದರೂ ಸರಿಪಡಿಸಿದರೆ ಹಾಗೂ ಈ ಸಾಬೂನನ್ನು ಬಜಾರಿನಲ್ಲಿ ಚೆನ್ನಾಗಿ ಮಾರಾಟ ಮಾಡುವಂಥ ಬುದ್ಧಿವಂತ ಮನುಷ್ಯ ನನಗೆ ಸಿಕ್ಕರೆ, ನಿಮ್ಮ ಹೇಳಿಕೆಯಂತೆ ಜನರ ಮನಸ್ಸನ್ನು ಈ ಸಾಬೂನಿನ ಕಡೆಗೆ ಆಕರ್ಷಿಸಬಹುದು. ಅಂಥ ಮನುಷ್ಯ ನಿಮ್ಮ ದೃಷ್ಟಿಯಲ್ಲಿರುವನೇ?'

ಹರಿಲಾಲ ಒಂದು ಕ್ಷಣ ಗೋದರೇಜ್ ಅವರನ್ನು ನೋಡಿದ. ಗೋದರೇಜ್ ಅವರಿಗೂ ಅವನ ಮಾತಿನಲ್ಲಿ ಆಸಕ್ತಿ ಉಂಟಾಗಿತ್ತು. ಹರಿಲಾಲ ಒಂದೇ ಕ್ಷಣದಲ್ಲಿ ತೀರ್ಮಾನಿಸಿದ, 'ಒಂದು ವೇಳೆ ನೀವು ನನ್ನ ಮಾತನ್ನು ಉದ್ಧಟತನವೆಂದು ತಿಳಿಯದಿದ್ದರೆ, ಆ ಹೊಸ ಸಾಬೂನನ್ನು ಮಾರುವ, ಅದರ ಮಾರಾಟವನ್ನು ಹೆಚ್ಚಿಸುವ ಕೆಲಸವನ್ನು ನಾನು ಮಾಡಬಲ್ಲೆ...ಇಂಡಿಯಾ, ಬರ್ಮಾ ಮತ್ತು ಸಿಲೋನ್‌ನಲ್ಲಿ ಆ ಹೊಸ ಸಾಬೂನನ್ನು ಜನಪ್ರಿಯಗೊಳಿಸಬಲ್ಲೆ.' ಹರಿಲಾಲ ಅಕಸ್ಮಾತ್ ಆತ್ಮವಿಶ್ವಾಸದಿಂದ ಹೇಳಿದ.

'ಹರಿಲಾಲ್, ನೀವು ಈ ಮಾತನ್ನು ಹೇಳುತ್ತಿದ್ದೀರ?' ಗೋದರೇಜ್ ಸೇಠ್ ಅವರು ಆಶ್ಚರ್ಯ ಮತ್ತು ಉತ್ಸಾಹದಿಂದ ಹೇಳಿದರು.

'ನೀವು...ನೀವು...ಒಂದು ವೇಳೆ ನೀವು ಈ ಕೆಲಸವನ್ನು ವಹಿಸಿಕೊಂಡರೆ ಇದಕ್ಕಿಂತ ಉತ್ತಮ ವಿಷಯ ಬೇರೇನಿದೆ? ಗೋದರೇಜ್ ಕಂಪನಿ ಇಂದಿನಿಂದಲೇ ನಿಮ್ಮನ್ನು ಸ್ವಾಗತಿಸುತ್ತದೆ.'

'ನನಗಿದು ಒಪ್ಪಿಗೆಯಿದೆ ಗೋದರೇಜ್ ಸೇಠ್‌ಜಿ,' ಹರಿಲಾಲ ಈ ಪ್ರಸ್ತಾಪವನ್ನು ಒಪ್ಪಿಕೊಂಡ, 'ನಿಮ್ಮ ಆ ಸಾಬೂನು ಮಾರಾಟದ ಜವಾಬ್ದಾರಿಯನ್ನು ನಾನು ಹೊರುತ್ತೇನೆ.'

'ಯಂಗ್ ಮೆನ್, ನನಗೆ ತುಂಬಾ ಖುಷಿಯಾಗುತ್ತಿದೆ,' ಗೋದರೇಜ್ ಅವರು ಮತ್ತೆ ಹರಿಲಾಲನ ಕೈಯನ್ನು ಕುಲುಕುತ್ತಾ ಉತ್ಸಾಹದಿಂದ ಹೇಳಿದರು, 'ನೀವು ನಾಳೆಯೇ ಕಂಪನಿಯ ಕಚೇರಿಗೆ ಬನ್ನಿ...'

ಹೀಗೆ ಅನಾಯಾಸವಾಗಿಯೇ, ಸಮಾರಂಭದ ಆ ಜಾಗದಲ್ಲಿ ಹರಿಲಾಲನಿಗೆ ಜೀವನದ ಹೊಸ ಹಾದಿಯೊಂದು ಕಂಡಿತು. ಮರುದಿನವೇ ಅವನು ಉತ್ಸಾಹದಿಂದ ಈ ಹೊಸ ಜೀವನವನ್ನು ಆರಂಭಿಸಿದ.

'ಹರಿಲಾಲ್!' ಗೋದರೇಜ್ ಅವರು ತುಂಬು ವಿಶ್ವಾಸದಿಂದ ಅವನಿಗೆ ಸ್ವತಂತ್ರ ಅಧಿಕಾರವನ್ನು ಕೊಟ್ಟರು. 'ನಿಮಗೆ ಸರಿ ಅನ್ನಿಸಿದ್ದನ್ನು ನೀವೇ ನಿರ್ಣಯಿಸಿ. ಕಂಪನಿ ನಿಮಗೆ ಯಾವ ಶರತ್ತನ್ನೂ ವಿಧಿಸುವುದಿಲ್ಲ, ನಿಮಗೆ ಯಾವ ಬಂಧನವೂ ಇಲ್ಲ. ಹಿಂದೂಸ್ತಾನ, ಬರ್ಮಾ ಮತ್ತು ಸಿಲೋನ್‌ಗಳಲ್ಲಿ ನಮ್ಮ ಸಾಬೂನು ಮಾರಾಟದ ವ್ಯವಸ್ಥೆಯಾಗಬೇಕು. ನಮ್ಮ ಏಜೆಂಟ್‌ಗಳು ಎಲ್ಲಾ ಕಡೆಗಳಲ್ಲಿಯೂ ಇದ್ದಾರೆ, ನೀವು ನಿಮ್ಮ ಕಾರ್ಯಕ್ರಮವನ್ನು ನೀವೇ ತಯಾರಿಸಿಕೊಳ್ಳಲು ಸ್ವತಂತ್ರರಾಗಿರುತ್ತೀರ.'

'ಸೇಠ್‌ಜಿ, ನೀವೇನೂ ಯೋಚಿಸಬೇಡಿ,' ಹರಿಲಾಲ ಅವರಿಗೆ ಭರವಸೆಯನ್ನಿತ್ತ, 'ನಾನೇನಾದರೂ ಹೇಳಿದರೆ, ಅದು ದೊಡ್ಡ ಮಾತಾಗುವುದು. ನನ್ನ ಕೆಲಸವನ್ನೇ ನೋಡಿ.'

ಕೆಲವೇ ದಿನಗಳಲ್ಲಿ ಹರಿಲಾಲ ಫಲಿತಾಂಶ ತಂದ, ಅದನ್ನು ನೋಡಿ ಸೇಠ್ ಗೋದರೇಜರಿಗೆ ಆಶ್ಚರ್ಯವಾಯಿತು. ಹರಿಲಾಲ ಮುಂಬೈಯಲ್ಲಿ ಕಾಲು ಮಡಚಿ ಕೂರುವುದನ್ನು ಬಿಟ್ಟು ಪೂನಾ, ನಾಗಪುರ, ಮೈಸೂರು, ಬೆಂಗಳೂರು, ಲಖನೌ ಮತ್ತು ಅಮೃತಸರ ಮುಂತಾದ ಬೇರೆ ಬೇರೆ ಊರುಗಳಿಗೆ ಹೋಗಿ ವೈಯಕ್ತಿಕವಾಗಿ ಆ ಹೊಸ ಮಾಲನ್ನು ಮಾರುವ ಪ್ರಯತ್ನವನ್ನು ಮಾಡಿದ. ಒಂದು ಜಾಗದಲ್ಲಿ ಬೇರೂರುವುದಕ್ಕೆ ಬದಲಾಗಿ ಬೇರೆಬೇರೆ ಊರುಗಳಿಗೆ ಓಡಾಡಿದ, ಇದು ಅವನ ಸ್ವಭಾವಕ್ಕೆ ಅನುಕೂಲವಾಗುತ್ತಿತ್ತು. ಹರಿಲಾಲನ ಮೂಲಕ ಗೋದರೇಜ್‌ರ ಸಾಬೂನು ಬಜಾರಿನಲ್ಲಿ ಚೆನ್ನಾಗಿ ಮಾರಾಟವಾಯಿತು. ಈಗ ಹರಿಲಾಲನಿಗೆ ಹಣದ ಕೊರತೆ ಅಷ್ಟು ಕಾಡಿಸುತ್ತಿರಲಿಲ್ಲ. ತನ್ನ ಸ್ವಪ್ರಯತ್ನದಿಂದ ಅವನಿಗೆ ಹಣದ ಅನುಕೂಲ ದೀರ್ಘ ಅವಧಿಯ ನಂತರ ಲಭಿಸಿತ್ತು, ಈಗ ಅವನಲ್ಲಿ ಉತ್ಸಾಹವಿತ್ತು.

ರಾಜಕೋಟವನ್ನು ಬಿಡುವಾಗ ಅವನು ಹತಾಶನಾಗಿದ್ದ, ಈಗ ಬದಲಾವಣೆಯಾಗಿತ್ತು. ರಾಜಕೋಟದಲ್ಲಿ ಮಕ್ಕಳೊಂದಿಗೆ ಕಳೆದಾಗ ಲಭಿಸಿದ ಮಾನಸಿಕ ಸಂತೋಷ ಅವನನ್ನು ಆಕರ್ಷಿಸುತ್ತಿತ್ತು. ತಾನು ಮಕ್ಕಳ ವಿದ್ಯಾಭ್ಯಾಸಕ್ಕೆ ಏನೂ ಮಾಡಲಾಗಲಿಲ್ಲ ಎಂಬ ಚಿಂತೆ ಅವನನ್ನು ಆವರಿಸುತ್ತಿತ್ತು. ವಿದ್ಯಾಭ್ಯಾಸಕ್ಕಾಗಿಯೇ ಅವನು ಬಾಪೂ ಅವರೊಂದಿಗೆ ಮನಸ್ತಾಪವನ್ನು ಎದುರಿಸಿದ್ದ. ಒಂದು ವೇಳೆ ತಾನೇ ತನ್ನ ಮಕ್ಕಳ ವಿದ್ಯಾಭ್ಯಾಸಕ್ಕೆ ಯಾವುದೇ ವ್ಯವಸ್ಥೆಯನ್ನು ಮಾಡಲಾಗದಿದ್ದರೆ, ಇದು ತನ್ನ ವಿಫಲತೆ ಎಂದೇ ತಿಳಿಯಬೇಕಾಗುವುದು. ಈಗ ಅವನಿಗೆ ಉತ್ತಮ ಮತ್ತು ನಿರಂತರ ಆದಾಯ ಬರಲಾರಂಭಿಸಿತ್ತು. ಮುಂಬೈಯಲ್ಲಿ ಒಂದು ಒಳ್ಳೆಯ ಜಾಗ ಸಿಕ್ಕರೆ ಮಕ್ಕಳನ್ನು ಇಲ್ಲಿಗೇ ಕರೆಯಿಸಿಕೊಂಡರೆ ಅವರಿಗೂ ಒಳ್ಳೆಯದೆಂದು ಹರಿಲಾಲನಿಗೆ ಅನ್ನಿಸಿತು.

ಆದರೆ ಇಷ್ಟೆಲ್ಲಾ ಯೋಚನೆಗಳಲ್ಲಿ ತೊಡಗಿದ್ದಾಗ್ಯೂ ಅವನಿಂದ ಮದ್ಯವನ್ನು ಇದುವರೆಗೆ ತ್ಯಜಿಸಲು ಸಾಧ್ಯವಾಗಿರಲಿಲ್ಲ. ಮದ್ಯ ಈಗ ಅವನ ಕೈಕೋಲಿಗೆ ಪ್ರತಿಯಾಗಿ ಊರುಗೋಲಾಗಿ ಮಾರ್ಪಾಡಾಗಿತ್ತು. ಮದ್ಯವಿಲ್ಲದೆ ಮುಂದಕ್ಕೆ ಹೋಗಲು ಅವನಿಂದ ಸಾಧ್ಯವಾಗುತ್ತಿರಲಿಲ್ಲ. ಮೊದಲು ಮದ್ಯದ ಒಂದು ಎರಡು ಪೆಗ್ ಸಾಕಾಗುತ್ತಿತ್ತು, ಆದರೆ ಈಗ ಇಡೀ ಬಾಟಲಿ ಸಹ ಸಾಕಾಗುತ್ತಿರಲಿಲ್ಲ. ಬಾಟಲಿಯ ಮದ್ಯ ಶರೀರದೊಳಗೆ ಹೋಗುತ್ತಲೇ ಅವನ ಬೇಜವಾಬ್ದಾರಿಯ ವರ್ತನೆ ಅವನ ಜೀವನದ ಒಂದು ಅಂಗವೇ ಆಗುತ್ತಿತ್ತು. ಕಂಪನಿಯ ಕೆಲಸಕ್ಕಾಗಿ ಅವನು ಅನೇಕ ದಿನ ಊರಿನಿಂದ ಹೊರಗಿರುತ್ತಿದ್ದ, ಅಷ್ಟು ದಿನಗಳು ಅವನ ಸ್ವಚ್ಛಂದತೆಗೆ ಯಾವುದೇ ನಿಯಂತ್ರಣಗಳಿಲ್ಲದ ದಿನಗಳಾಗುತ್ತಿದ್ದವು. ಅವನಿಗೆ ಪ್ರತಿಯೊಂದು ಹೊಸ ಸ್ಥಳ, ಹೊಸ ಮೈದಾನದಂತಾಗುತ್ತಿತ್ತು.

ಅಲ್ಲದೆ, ಅವನು ಮುಂಬೈಯಲ್ಲಿದ್ದರೆ ಕಂಪನಿಯ ಕಚೇರಿಗೆ ಹೋಗುವುದಕ್ಕೆ ಪ್ರತಿಯಾಗಿ ದಿನವಿಡಿ ಕಶ್ಮೀರ್ ಹೋಟೆಲ್‌ನ ತನ್ನ ಕೋಣೆಯಲ್ಲಿರುತ್ತಿದ್ದ.

(ಸಶೇಷ)